**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.259/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 12.4.2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯು:** ದೇವನಹಳ್ಳಿ ತಾಲ್ಲೂಕು ವಿಜಯಪುರ ಪಟ್ಟಣದ ಗೂಳಪ್ಪನ ಮಠದ ರಸ್ತೆಯಲ್ಲಿರುವ ಪುರಸಭಾ ಖಾನೆಷುಮಾರಿ ನಂ.168/162/116 ವಿಸ್ತೀರ್ಣ $44^{1/2}$ x $2^{1/2}$ ಅಡಿಗಳ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಶ್ರೀ ಕೆ.ಎಲ್.ಮಂಜುನಾಥ್ ಅವರ ಹೆಸರಿನಲ್ಲಿ ಅಕ್ರಮವಾಗಿರುವ ಖಾತೆಯನ್ನು ವಜಾಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ನಾರಾಯಣಸ್ವಾಮಿ, ಗೂಳೂರಪ್ಪನಮಠದ ನಿವಾಸಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಮಾರುತಿ ಶಂಖರ್, ಮುಖ್ಯಾಧಿಕಾರಿಗಳು, ಪುರಸಭೆ, ವಿಜಯಪುರ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ವಿಜಯಪುರ ಪಟ್ಟಣದ ಗೂಳಪ್ಪನ ಮಠದ ರಸ್ತೆಯಲ್ಲಿರುವ ಪುರಸಭಾ ಖಾನೆಷುಮಾರಿ ನಂ.168/162/116 ವಿಸ್ತೀರ್ಣ $44^{1/2}$ x $2^{1/2}$ ಅಡಿಗಳ ಖಾಲಿ ನಿವೇಶನದ ಸ್ವತ್ತನ್ನು ಯಾವುದೇ ದಾಖಲೆಗಳಿಲ್ಲದೆ ಶ್ರೀ ಕೆ.ಎಲ್.ಮಂಜುನಾಥ್, ತಂದೆ ಲಕ್ಷ್ಮಿನರಸಿಂಹಯ್ಯ ಇವರ ಹೆಸರಿಗೆ ಬೋಗಸ್ ದಾಖಲೆ ಸೃಷ್ಟಿಸಿ ಖಾತೆ ಮಾಡಿರುತ್ತಾರೆ. ಆದರೆ ಕೆ.ಎಲ್.ಮಂಜುನಾಥ್,ತಂದೆ ಲಕ್ಷ್ಮಿನರಸಿಂಹಯ್ಯ ಇವರು ದಿ.13.7.2007ರಂದು ರಿಜಿಸ್ಟರ್ ನಂ.2249/2007–08ರಂತೆ ಲಲಿತಮ್ಮನಿಂದ ಶುದ್ಧಕ್ರಯಕ್ಕೆ $44^{1/2}$ x $13^{3/4}$ ಅಡಿ ನಿವೇಶನದ ಸ್ವತ್ತನ್ನು ಮಾತ್ರ ನೋಂದಾಯಿಸಿಕೊಂಡಿರುತ್ತಾರೆ. ಆದರೆ ಖಾತೆ ಬದಲಾವಣೆ ಸಮಯದಲ್ಲಿ ಎದುರುದಾರರು ವಿಸ್ತೀರ್ಣ $44^{1/2}$

x $2^{1/2}$ ಅಡಿಗಳನ್ನು ಹೆಚ್ಚುವರಿಯಾಗಿ ಖಾತೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಕೆ.ಎಲ್.ಮಂಜುನಾಥ್ ಅವರು ಕೇವಲ ವಿ.$44^{1/2}$*$13^{3/4}$ ಅಡಿಗಳನ್ನು ಮಾತ್ರ ಸಿ.ಲಲಿತಮ್ಮ ಅವರಿಂದ ಖರೀದಿಸಿದ್ದು ಕಂಡುಬರುತ್ತದೆ. ಆದರೆ ಆಗ ವಿಷಯ ನಿರ್ವಾಹಕರಾದ ಮೊಹ್ಮದ್ ಹಸ್ಮತುಲ್ಲಾ, ದ್ವಿತೀಯ ದರ್ಜೆ ಸಹಾಯಕರು, ವಿ.$44^{1/2}$ x $13^{3/4}$ ಅಡಿಗಳನ್ನು ಮಾತ್ರ ಖಾತೆ ಮಾಡದೆ, ನೋಂದಣಿ ಇಲ್ಲದ ಪರಸ್ಪರ ಒಪ್ಪಿಗೆ ಪತ್ರದಲ್ಲಿದ್ದಂತಹ $44^{1/2}$ x $2^{1/2}$ ಅಡಿಗಳನ್ನೂ ಸಹಾ ಕೆ.ಎಲ್. ಮಂಜುನಾಥ ಅವರ ಹೆಸರಿನಲ್ಲಿ ಹಕ್ಕು ವರ್ಗಾವಣೆ ಮಾಡಿರುತ್ತಾರೆ. ಆದರೆ ಪರಸ್ಪರ ಒಪ್ಪಿಗೆ ಪತ್ರ ದಾಖಲೆಗಳಲ್ಲಿ ಲಭ್ಯವಿರುವುದಿಲ್ಲ. ಆದ್ದರಿಂದ ಹೆಚ್ಚುವರಿ ಖಾತೆ ಮಾಡಿದ $44^{1/2}$ x $2^{1/2}$ ವಿಸ್ತೀರ್ಣದ ದಾಖಲೆ ವಜಾಗೊಳಿಸಲು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಕೆ.ಎಲ್. ಮಂಜುನಾಥ ಅವರ ಸಿ.ಲಲಿತಮ್ಮ ಅವರಿಂದ ಖಾನೆಷುಮಾರಿ ನಂ.168/162/116 ವಿ.$44^{1/2}$ x $13^{3/4}$ ಅಡಿ ಅಳತೆಯ ಜಾಗೆಯನ್ನು ಶುದ್ಧಕ್ರಯಕ್ಕೆ ಪಡೆದು ನೋಂದಣಿಮಾಡಲಾಗಿರುತ್ತದೆ. ಆದರೆ ಇದರ ಜೊತೆಗೆ ವಿ.$44^{1/2}$ x $2^{1/2}$ ವಿಸ್ತೀರ್ಣದ ಜಾಗೆಯನ್ನು ಸಹ ಕೆ.ಎಲ್.ಮಂಜುನಾಥ್ ಅವರ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಈ ಬಗ್ಗೆ ಆಸ್ತಿ ತೆರಿಗೆ ರಿಜಿಸ್ಟರಿನಲ್ಲಿ ನಮೂದಾದ ದಾಖಲೆ ಲಭ್ಯವಿರುತ್ತದೆ. ಆದರೆ ಈ ರೀತಿ ಅಕ್ರಮವಾಗಿ ಹೆಚ್ಚುವರಿ ಖಾತೆಯನ್ನು ಆಗಿನ ದ್ವಿತೀಯ ದರ್ಜೆ ಸಹಾಯಕರಾದ ಮೊಹಮದ್ ಹಸ್ಮತುಲ್ಲಾ ಅವರು ಮಾಡಿರುತ್ತಾರೆಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

6. ದೂರುದಾರರ ಆಪಾದನೆಗಳ ಪ್ರಕಾರ ಕೆ.ಎಲ್.ಮಂಜುನಾಥ್ ಅವರ ಖಾತೆಗೆ ಹೆಚ್ಚುವರಿಯಾಗಿ $44^{1/2}$ x $2^{1/2}$ ವಿಸ್ತೀರ್ಣದ ಖಾತೆಯಾಗಿರುವುದನ್ನು ಎದುರುದಾರರು ಒಪ್ಪಿಕೊಂಡು ಆ ನಿಟ್ಟಿನಲ್ಲಿ ಇದನ್ನು

ವಜಾಗೊಳಿಸಲು ಜಿಲ್ಲಾಧಿಕಾರಿಗಳಿಗೆ ಮನವಿಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದರೆ ಇದುವರೆಗೆ ಈ ಖಾತೆ ವಜಾಗೊಳಿಸಿದ್ದು ಕಂಡುಬರುವುದಿಲ್ಲ. ಆಗ ಖಾತೆ ಬದಲಾವಣೆ ಮಾಡಿದ ಮೊಹಮದ್ ಹಸ್ಮತುಲ್ಲಾ ಇವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಎದುರುದಾರರೇ ಈ ಅಕ್ರಮವೆಸಗಿದ್ದಾರೆಂದು ಹೇಳಲು ಸೂಕ್ತ ಸಾಕ್ಷಾಧಾರಗಳು ಇರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ದ ಕ್ರಮಕೈಗೊಳ್ಳುವ ಬದಲಿಗೆ ಕೆ.ಎಲ್.ಮಂಜುನಾಥ್ ಅವರ ಹೆಸರಿನಲ್ಲಿ ಖಾನೆಷುಮಾರಿ ನಂ.168/162/116 ವಿ.$44^{1/2}$ x $2^{1/2}$ ಅಡಿ ಅಳತೆಯ ಜಾಗೆಯ ಖಾತೆಯನ್ನು ವಜಾಗೊಳಿಸುವುದು ಅವಶ್ಯಕವಾಗಿರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೇವನಹಳ್ಳಿ ತಾಲ್ಲೂಕು ವಿಜಯಪುರ ಪಟ್ಟಣದ ಗೂಳಪ್ಪನ ಮಠದ ರಸ್ತೆಯಲ್ಲಿರುವ ಪುರಸಭಾ ಖಾನೆಷುಮಾರಿ ನಂ.168/162/116 ವಿಸ್ತೀರ್ಣ $44^{1/2}$ x $2^{1/2}$ ಅಡಿಗಳ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಶ್ರೀ ಕೆ.ಎಲ್.ಮಂಜುನಾಥ್ ಅವರ ಹೆಸರಿನಲ್ಲಿ ಅಕ್ರಮವಾಗಿರುವ ಖಾತೆಯನ್ನು ವಜಾಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/4/17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

12/4